# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 978 |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17.12.2024 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಸಣ್ಣ ಕೈಗಾರಿಕಾ ಇಲಾಖೆ ವ್ಯಾಪ್ತಿಯಡಿಯಲ್ಲಿ ಬರುವ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಎಸ್.ಐ.ಡಿ.ಸಿ) ವತಿಯಿಂದ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೈಗಾರಿಕಾ ವಸಾಹತುಗಳಲ್ಲಿ ಎಷ್ಟು ನಿವೇಶನಗಳನ್ನು / ಶೆಡ್‌ಗಳನ್ನು ಹಂಚಿಕೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಎಸ್.ಐ.ಡಿ.ಸಿ) ವತಿಯಿಂದ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಹಂಚಿಕೆ ಮಾಡಿರುವ ನಿವೇಶನ / ಮಳಿಗೆಗಳ ವಿವರಣಾ ಪಟ್ಟಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಆ) | ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸಲು ಹಾಗೂ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲು ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ಎಷ್ಟು ಎಕರೆ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ; | ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ನಿಗಮವು ಈ ಕೆಳಕಂಡ ಸ್ಥಳಗಳಲ್ಲಿ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ. |

| ಕ್ರ ಸಂ | ವರ್ಷ | ಜಿಲ್ಲೆ ಹಾಗೂ ಸ್ಥಳ | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| 1 | 2021 | ಬಗ್ಗೇನಹಳ್ಳಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ | 9.36 |
| 2 | 2022 | ಕೊಡ್ಕಣಿ, ಶಿರಸಿ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ | 47.06 |
| 3 | 2022 | ಬೈಲಹೊಂಗಲ, ಬೆಳಗಾವಿ ಜಿಲ್ಲೆ | 3.00 |
| 4 | 2023 | ಕಣಗಾಲ, ಬೆಳಗಾವಿ ಜಿಲ್ಲೆ | 25.00 |
| 5 | 2023 | ಬದನಗುಪ್ಪೆ, ಚಾಮರಾಜನಗರ ಜಿಲ್ಲೆ | 25.00 |
| 6 | 2023 | ಪಿ. ಚಿತ್ತಾಪುರ, ಗುಲ್ಬರ್ಗಾ ಜಿಲ್ಲೆ | 3.08 |
| 7 | 2023 | ಇಂಡಿ, ವಿಜಯಪುರ ಜಿಲ್ಲೆ | 19.38 |
| 8 | 2024 | ಹಳಿಸಾಗರ, ಶಹಪುರ ತಾಲ್ಲೂಕು, ಯಾದಗಿರಿ ಜಿಲ್ಲೆ | 48.00 |
| 9 | 2024 | ಮುದ್ದೆಬಿಹಾಳ, ವಿಜಯಪುರ ಜಿಲ್ಲೆ | 5.21 |

**ಇ)** ಪ್ರತ್ಯೇಕವಾಗಿ ಬೆಂಗಳೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ನಿವೇಶನಗಳನ್ನು / ಶೆಡ್‌ಗಳನ್ನು ಉದ್ಯಮಿದಾರರಿಗೆ ನೀಡಲಾಗಿದೆ; ಸೈಟ್‌ಗಳು / ಶೆಡ್‌ಗಳ ಹಂಚಿಕೆ ಮಾಡಲು ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

- ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ 41, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 94, ಹೀಗೆ ಒಟ್ಟು 135 ಮಳಿಗೆ / ನಿವೇಶನಗಳನ್ನು ಉದ್ಯಮಿದಾರರಿಗೆ ಹಂಚಿಕೆ ಮಾಡಲಾಗಿದೆ. ಅದರಂತೆ ಬೆಳಗಾವಿ ಜಿಲ್ಲೆಯಲ್ಲಿ 13 ಮಳಿಗೆ / ನಿವೇಶನಗಳನ್ನು ಉದ್ಯಮಿದಾರರಿಗೆ ಹಂಚಿಕೆ ಮಾಡಲಾಗಿದೆ.
- ಬೆಂಗಳೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಹಂಚಿಕೆ ಮಾಡಲು ಸ್ವೀಕೃತವಾಗಿರುವ ಅರ್ಜಿಗಳ ವಿವರ ಈ ಕೆಳಗಿನಂತಿದೆ:

| ಕ್ರ ಸಂ | ಕೈಗಾರಿಕಾ ವಸಾಹತುವಿನ ಹೆಸರು | ಅರ್ಜಿ ಆಹ್ವಾನಿಸಿದ ಮಳಿಗೆಗಳ ಸಂಖ್ಯೆ | ಸ್ವೀಕರಿಸಿದ ಅರ್ಜಿಗಳಸಂಖ್ಯೆ | ಅರ್ಜಿ ಆಹ್ವಾನಿಸಿದ ನಿವೇಶನಗಳ ಸಂಖ್ಯೆ | ಸ್ವೀಕರಿಸಿದ ಅರ್ಜಿಗಳ ಸಂಖ್ಯೆ |
|---|---|---|---|---|---|
| | **ಬೆಂಗಳೂರು ನಗರ ಜಿಲ್ಲೆ** | | | | |
| 1 | ಮುತ್ತುಗದಹಳ್ಳಿ | 01 | 04 | 24 | 47 |
| 2 | ಪೀಣ್ಯಾ 1ನೇ ಹಂತ | 03 | 01 | -- | -- |
| 3 | ಎಲೆಕ್ಟ್ರಾನಿಕ್ ಸಿಟಿ | 01 | 05 | -- | -- |
| | **ಬೆಂಗಳೂರು ಗ್ರಾಮಾಂತರ ಜಿಲ್ಲೆ** | | | | |
| 4 | ನೆಲಮಂಗಲ | -- | -- | 37 | 137 |
| 5 | ಹೊಸಕೋಟೆ | -- | -- | 01 | 01 |
| | **ಬೆಳಗಾವಿ ಜಿಲ್ಲೆ** | | | | |
| 6 | ದೇಸೂರು | -- | -- | 13 | 23 |
| 7 | ಬೋರಗಾವ್ | -- | -- | 08 | 13 |
| 8 | ಅಥಣಿ | -- | -- | 13 | 25 |
| 9 | ಮಾಂಗೂರು | -- | -- | 196 | 196 |

**ಈ)** ಈ ವಸಾಹತುಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರದ ವತಿಯಿಂದ ಉದ್ಯಮಿದಾರರಿಗೆ ನೆರವು ನೀಡಲಾಗುತ್ತಿದೆಯೇ; ಈ ನಿವೇಶನಗಳನ್ನು / ಶೆಡ್‌ಗಳನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಮೀಸಲಾತಿಯನ್ನು ಪರಿಗಣಿಸಿ ಹಂಚಿಕೆ ಮಾಡಲಾಗುತ್ತಿದೆಯೇ; ಮತ್ತು ರಾಜ್ಯ ಮತ್ತು ದೇಶದ ಪ್ರಗತಿ / ಆರ್ಥಿಕ ಬೆಳವಣಿಗೆಯಲ್ಲಿ ಸಣ್ಣ ಕೈಗಾರಿಕೆಗಳ ಕೊಡುಗೆ ಎಷ್ಟು?

ಈ ವಸಾಹತುಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ನಿಗಮದ ವತಿಯಿಂದ ಉದ್ಯಮಿದಾರರಿಗೆ ಈ ಕೆಳಕಂಡ ರಿಯಾಯಿತಿ / ಸಹಾಯಧನ ಸೌಲಭ್ಯವನ್ನು ನೀಡಲಾಗುತ್ತಿದೆ.

1) ಸಣ್ಣ ಕೈಗಾರಿಕೆ ಸ್ಥಾಪಿಸಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತವು ಸರ್ಕಾರದ ಹೊಸ ಕೈಗಾರಿಕಾ ನೀತಿ 2020-2025 ರಂತೆ ಮಳಿಗೆ / ನಿವೇಶನಗಳ ಹಂಚಿಕೆಯಲ್ಲಿ ಪರಿಶಿಷ್ಟಜಾತಿ / ಪರಿಶಿಷ್ಟ ಪಂಗಡ ಹಂಚಿಕೆ ದಾರರಿಗೆ ಶೇ.24.10 ರಷ್ಟು ಮೀಸಲಾತಿಯನ್ನು ಅನುಸರಿಸಲಾಗುತ್ತಿದೆ. ಈ ಪೈಕಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಮಹಿಳೆಯವರಿಗೆ ಕೈಗಾರಿಕಾ ಮಳಿಗೆ /ನಿವೇಶನಗಳ ಹಂಚಿಕೆಯಲ್ಲಿ ಶೇಕಡ 25 ರಷ್ಟು ಮೀಸಲಾತಿಯನ್ನು ಸಹ ನೀಡಲಾಗುತ್ತಿದೆ.

2) ಸಣ್ಣ ಕೈಗಾರಿಕೆ ಸ್ಥಾಪಿಸಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ವತಿಯಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಹಂಚಿಕೆಯಾದ ನಿವೇಶನ ಬೆಲೆಯ ಶೇ.75 ರಷ್ಟು ಸಹಾಯಧನ / ರಿಯಾಯಿತಿಯನ್ನು ಸರ್ಕಾರದ ಅನುದಾನದಲ್ಲಿ ವಿಸ್ತರಿಸಲಾಗುತ್ತಿದೆ ಹಾಗೂ ಸರ್ಕಾರದ ಎಸ್.ಸಿ.ಪಿ / ಟಿ.ಎಸ್.ಪಿ. ಯೋಜನೆಯ ಅನುದಾನದಲ್ಲಿ ಮಳಿಗೆಗಳನ್ನು ನಿರ್ಮಾಣ ಮಾಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಹಂಚಿಕೆ ಮಾಡಿ,

| | | |
|---|---|---|
| | | ಮಳಿಗೆಯ ನಿವೇಶನದ ಬೆಲೆಯ ಶೇ.75 ರಷ್ಟು ಹಾಗೂ ಮಳಿಗೆ **ನಿರ್ಮಾಣದ ವೆಚ್ಚಕ್ಕೆ ಶೇ.90 ರಷ್ಟು ಸಹಾಯಧನ** / ರಿಯಾಯಿತಿಯನ್ನು ನೀಡಲಾಗುತ್ತಿದೆ.<br><br>3) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಹಂಚಿಕೆ ಪತ್ರದಲ್ಲಿನ ಮೊತ್ತದ ಶೇ.10 ರಷ್ಟು ಮೊತ್ತವನ್ನು ಮಾತ್ರ ಪಾವತಿಸಿ, ನಂತರ ನಿವೇಶನಗಳನ್ನು ಫಲಾನುಭವಿಗೆ ಸ್ವಾಧೀನ ನೀಡಿ, ಉಳಿದ ಶೇ.15 ರಷ್ಟು ಮೊತ್ತವನ್ನು ಸ್ವಾಧೀನ ಪತ್ರ ವಿತರಿಸಿದ ದಿನಾಂಕದಿಂದ 8 ತ್ರೈಮಾಸಿಕ ಸಮ ಕಂತುಗಳಲ್ಲಿ ಬಡ್ಡಿಯೊಂದಿಗೆ ಫಲಾನುಭವಿಯಿಂದ ಪಡೆಯಲಾಗುವುದು.<br><br>4) ಸರ್ಕಾರದ ಹೊಸ ಕೈಗಾರಿಕಾ ನೀತಿ 2020-2025 ರಂತೆ ಕೆ.ಎಸ್.ಎಸ್.ಡಿ.ಸಿ. ಸಂಸ್ಥೆಯು ಅಭಿವೃದ್ಧಿ ಪಡಿಸುವ ಕೈಗಾರಿಕಾ ವಸಾಹತುಗಳಲ್ಲಿ ಅಲ್ಪಸಂಖ್ಯಾತ, ಹಿಂದುಳಿದ ವರ್ಗ (ವರ್ಗ-1 ಮತ್ತು ವರ್ಗ-2ಎ) ವಿಕಲಚೇತನ ಉದ್ದಿಮೆದಾರರಿಗೆ ಕನಿಷ್ಟ ಶೇ.10 ರಷ್ಟು ನಿವೇಶನ / ಶೆಡ್‌ಗಳನ್ನು ಮೀಸಲಿಡಲಾಗುತ್ತಿದೆ.<br><br>5) ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಖಾಲಿ ಇರುವ ನಿವೇಶನ / ಮಳಿಗೆ / ಫ್ಲ್ಯಾಟ್ಸ್ / ಅಂಗಡಿ ಹಾಗೂ ಗೋದಾಮುಗಳ ಹಂಚಿಕೆಯಲ್ಲಿ ಪರಿಶಿಷ್ಟಜಾತಿ / ಪರಿಶಿಷ್ಟ ಪಂಗಡ, ಅಲೆಮಾರಿ ಪಂಗಡ, ವಿಕಲಚೇತನರು, ಅಲ್ಪಸಂಖ್ಯಾತರು ಪ್ರವರ್ಗಗಳಲ್ಲಿ ಒಟ್ಟಾರೆ ಶೇ.30 ರಷ್ಟು ಮಹಿಳೆಯರಿಗಾಗಿ ಮೀಸಲಾಗಿ ನೀಡಲಾಗುತ್ತಿದೆ.<br><br>ಒಂದು ಅಂದಾಜಿನ ಪ್ರಕಾರ ಸಣ್ಣ ಕೈಗಾರಿಕೆಗಳು ದೇಶದ ಒಟ್ಟಾರೆ ದೇಶಿಯ ಆಂತರಿಕ ಉತ್ಪನ್ನ (ಜಿ.ಡಿ.ಪಿ)ಕ್ಕೆ ಶೇ.30 ರಷ್ಟು ಕೊಡುಗೆ ನೀಡುತ್ತಿವೆ. |

ಸಿಐ 303 ಸಿಎಸ್ ಸಿ 2024

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು.

**ಅನುಬಂಧ-1**

ಸಣ್ಣ ಕೈಗಾರಿಕಾ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಗಳಲ್ಲಿ ಹಂಚಿಕೆ ಮಾಡಿರುವ ನಿವೇಶನ/ಮಳಿಗೆಗಳ ವರ್ಷವಾರು ವಿವರ

| ಕ್ರ ಸಂ | ಜಿಲ್ಲೆಯ ಹೆಸರು | ವರ್ಷವಾರು ಹಂಚಿಕೆ ವಿವರ (ಮಳಿಗೆ&ನಿವೇಶನ ಸೇರಿ ಒಟ್ಟು) | | |
|---|---|---|---|---|
| | | 2021-22 | 2022-23 | 2023-24 |
| 1 | ಬೆಂಗಳೂರು ನಗರ | - | 41 | - |
| 2 | ಬೆಂಗಳೂರು ಗ್ರಾಮಾಂತರ | - | 94 | - |
| 3 | ರಾಮನಗರ | - | 4 | - |
| 4 | ತುಮಕೂರು | 18 | 33 | - |
| 5 | ಚಿಕ್ಕಬಳ್ಳಾಪುರ | 8 | 17 | - |
| 6 | ಕೋಲಾರ | - | - | - |
| 7 | ದಾವಣಗೆರೆ | 20 | - | - |
| 8 | ಚಿತ್ರದುರ್ಗ | 27 | 38 | - |
| 9 | ಮೈಸೂರು | | | - |
| 10 | ಮಂಡ್ಯ | 3 | 10 | - |
| 11 | ಕೊಡಗು | - | - | - |
| 12 | ಚಾಮರಾಜನಗರ | 2 | - | - |
| 13 | ಶಿವಮೊಗ್ಗ | 02 | 77 | - |
| 14 | ಚಿಕ್ಕಮಗಳೂರು | - | - | - |
| 15 | ಹಾಸನ | - | 1 | - |
| 16 | ದಕ್ಷಿಣ ಕನ್ನಡ | - | 1 | - |
| 17 | ಉಡುಪಿ | - | 4 | - |
| 18 | ಧಾರವಾಡ | 1 | 9 | - |
| 19 | ಹಾವೇರಿ | 1 | 6 | - |
| 20 | ಗದಗ | 20 | 5 | - |
| 21 | ಉತ್ತರಕನ್ನಡ | - | - | - |
| 22 | ಬೆಳಗಾವಿ | 1 | 12 | - |
| 23 | ಬಾಗಲಕೋಟೆ | 5 | 5 | - |
| 24 | ವಿಜಯಪುರ | 10 | - | - |
| 25 | ಕಲಬುರಗಿ | - | - | 27 |
| 26 | ಬೀದರ್ | 38 | 4 | 9 |
| 27 | ಯಾದಗಿರಿ | - | - | 2 |
| 28 | ಬಳ್ಳಾರಿ | 8 | - | - |
| 29 | ಕೊಪ್ಪಳ | - | - | - |
| 30 | ವಿಜಯನಗರ | - | 2 | - |
| 31 | ರಾಯಚೂರು | 5 | - | - |
| | ಒಟ್ಟು | 169 | 363 | 38 |

ವ್ಯವಸ್ಥಾಪಕ ನಿರ್ದೇಶಕರು